JUNE 03, 2025

AKASHAVANI - DHARWAD

PRADESH SAMACHARA (KANNADA) 12.00 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮೈಸೂರಿನ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಗದಗ ಜಿಲ್ಲೆ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ, ಲಕ್ಕುಂಡಿ ಗ್ರಾಮದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ, ಉತ್ಖನನ ಕಾರ್ಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಈ ಮಧ್ಯಾಹ್ನ ಚಾಲನೆ ನೀಡಲಿದ್ದಾರೆ. ಶಿಲ್ಪ ಕಲೆಗೆ ಪ್ರಸಿದ್ಧವಾದ, ಲಕ್ಕುಂಡಿ ಗ್ರಾಮದಲ್ಲಿ, ಪುರಾತನ ನೂರು ದೇವಸ್ಥಾನಗಳು ಮತ್ತು ಜಿನಾಲಯಗಳು ಹಾಗೂ ನೂರು ಕಲ್ಯಾಣಿಗಳಿದ್ದವು. ಇವುಗಳನ್ನು ಮರು ಪ್ರತಿಷ್ಠಾಪಿಸಲು, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರು, ಮುತುವರ್ಜಿವಹಿಸಿ, ಉತ್ಖನನ ಕಾರ್ಯಕ್ಕೆ ಯೋಜನೆ ರೂಪಿಸಿದ್ದಾರೆ. ವಿಧಾನಪರಿ ‘ತ್ ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ, ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

‘ಸೈಕ್ಲಿಂಗ್ ಮೂಲಕ ಆರೋಗ್ಯ, ಸಮಾನತೆ ಮತ್ತು ಸುಸ್ಥಿರತೆಯನ್ನು ಉತ್ತೇಜಿಸುವುದು’ ಎಂಬ ಧ್ಯೇಯದೊಂದಿಗೆ, ಇಂದು ವಿಶ್ವ ಸೈಕಲ್ ದಿನಾಚರಣೆ.

<><><>

ಹುಬ್ಬಳ್ಳಿ ಬೈಸಿಕಲ್ ಕ್ಲಬ್ ತಂಡದ ಸದಸ್ಯರು, ಸೈಕ್ಲಿಂಗ್ ಪ್ರಚುರ ಪಡಿಸಲು, ಸರ್ವ ಸೌಲಭ್ಯ ನಗರಿ, ಸ್ಮಾರ್ಟ್ ಸಿಟಿಗಳ ವ್ಯಾಪ್ತಿಯಲ್ಲಿ, ಪ್ರತ್ಯೇಕ ಸೈಕ್ಲಿಂಗ್ ಟ್ರ್ಯಾಕ್‌ಗೆ ಪ್ರಾವಧಾನ ಕಲ್ಪಿಸಲು, ಆಗ್ರಹಿಸಿದ್ದಾರೆ.

<><><>

ಜಂಟಿ ಪ್ರವೇಶ ಪರೀಕ್ಷೆ – ಜೆ.ಇ.ಇ. ಫಲಿತಾಂಶದಲ್ಲಿ, ಬೆಂಗಳೂರಿನ ಶ್ರೀರಾಮ ಗ್ಲೋಬಲ್ ಶಾಲೆಯ ವಿದ್ಯಾರ್ಥಿ ದಕ್ಷ್ ತಯಾಲಿಯಾ, ಬೀದರ್ ಜಿಲ್ಲೆ, ಭಾಲ್ಕಿ ತಾಲೂಕು, ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲದ ವಿದ್ಯಾರ್ಥಿ ಶಶಾಂಕ ಭೀಮಶಾ ಬರಗಲಿ, ಅಖಿಲ ಭಾರತ ರ್‍ಯಾಂಕಿಂಗ್‌ನಲ್ಲಿ, 15ನೇ ಸ್ಥಾನಗಳಿಸುವ ಮೂಲಕ, ರಾಜ್ಯಕ್ಕೆ ಮೊದಲಿಗರಾಗಿ, ಹೊರಹೊಮ್ಮಿದ್ದಾರೆ.

<><><>

ಚಿಕ್ಕಬಳ್ಳಾಪುರ ಜಿಲ್ಲೆ, ನಂದಿಗಿರಿ ಧಾಮದಲ್ಲಿ, ಈ ತಿಂಗಳ 19 ರಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ, ಸಚಿವ ಸಂಪುಟ ಸಭೆ ನಡೆಯಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಸಿ.ಸುಧಾಕರ್, ಗೌರಿಬಿದನೂರಿನಲ್ಲಿ ತಿಳಿಸಿದ್ದಾರೆ.

ಮಹಾತ್ಮ ಗಾಂಧೀಜಿಯವರು ಎರಡು ಬಾರಿ ಭೇಟಿ ನೀಡಿ, ವಿಶ್ರಾಂತಿ ಪಡೆದ ಹಾಗೂ ಸಾರ್ಕ್ ಸಮ್ಮೇಳನ ನಡೆದ, ಐತಿಹಾಸಿಕ ನಂದಿ ಗಿರಿಧಾಮದಲ್ಲಿ ರಾಜ್ಯ ಸಚಿವ ಸಂಪುಟ ಸಭೆ, ನಡೆಯಲಿದೆ. ಈ ಭಾಗದ ಸಮಸ್ಯೆಗಳ ಪರಿಹಾರಕ್ಕೆ, ಆದ್ಯತೆ ನೀಡಲಾಗುವುದು, ಎಂದರು.

<><><>

ಎಂ.ಸಿ. ಸುಧಾಕರ ಧ್ವನಿ 17 ಸೆಕೆಂದುಗಳು

<><><>

ಕೃಷ್ಣ ನ್ಯಾಯ ಮಂಡಳಿ ತೀರ್ಪಿನಂತೆ, ಆಲಮಟ್ಟಿ ಜಲಾಶಯದ ಎತ್ತರವನ್ನು, 524 ದಶಾಂಶ 25 ಮೀಟರ್‌ಗೆ ಹೆಚ್ಚಿಸಿದಲ್ಲಿ, ಯೋಜನೆಯ ಲಾಭ, ಕಲಬುರಗಿ, ಯಾದಗಿರಿ, ರಾಯಚೂರು, ವಿಜಯಪುರ, ಬಾಗಲಕೋಟೆ, ಕೊಪ್ಪಳ, ಹಾಗೂ ಗದಗ ಜಿಲ್ಲೆಗಳ, 5 ಲಕ್ಷ 30 ಸಾವಿರ ಹೆಕ್ಟರ್ ಕೃಷಿ ಭೂಮಿಗೆ ನೀರಾವರಿ ಒದಗಲಿದೆ ಎಂದು, ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಜಲಾಶಯದ ಎತ್ತರ ಹೆಚ್ಚಿಸುವುದರಿಂದ, 75 ಸಾವಿರದ 563 ಎಕರೆ ಜಲಾವೃತ್ತಗೊಳ್ಳಲಿದೆ.

<><><>

ಪ್ರಧಾನಮಂತ್ರಿ ಜನ್ ಔಷಧಿ ಕೇಂದ್ರಗಳನ್ನು, ರಾಜ್ಯದ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಮುಚ್ಚುವ ನಿರ್ಧಾರವನ್ನು ಹಿಂಪಡೆಯುವಂತೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮುಖ್ಯಮಂತ್ರಿಯವರನ್ನು ಆಗ್ರಹಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಮಾತನಾಡಿದ ಸಚಿವರು, ಸರ್ಕಾರಿ ಆಸ್ಪತ್ರೆಗಳ ಔಷಧಾಲಯಗಳಲ್ಲಿ, ರಕ್ತದೊತ್ತಡ ಹಾಗೂ ಮಧುಮೇಹಕ್ಕೆ ಸಂಬಂಧಿಸಿದ ಔಷಧಿಗಳು ಲಭ್ಯವಿಲ್ಲ. ಶ್ರೀ ಸಾಮಾನ್ಯರ ಆರೋಗ್ಯ ಕಾಪಾಡುವ ಮಹತ್ತರ ಉದ್ದೇಶದ ಯೋಜನೆ ಮುಂದುವರೆಸಲು, ಒತ್ತಾಯಿಸಿದರು.

<><><>

ಕರ್ನಾಟಕ ರಾಜ್ಯ ಸಾಬೂನು, ಮಾರ್ಜಕಗಳ ಸಂಸ್ಥೆ – ಕೆ.ಎಸ್.ಡಿಎಲ್. ತನ್ನ ಸಾಮಾಜಿಕ ಹೊಣೆಗಾರಿಕೆ ನಿಧಿ ಯೋಜನೆ ಅಡಿ, 2 ಕೋಟಿ ರೂಪಾಯಿ ವೆಚ್ಚದಲ್ಲಿ, ರಾಜ್ಯದ 10 ಸಾವಿರ ಅರಣ್ಯ ರಕ್ಷಕರು, ವೀಕ್ಷಕರು, ಮಾವುತರು, ಚಾಲಕರು ಮತ್ತು ಕಾವಾಡಿಗಳಿಗೆ, ಅಗತ್ಯ ವಸ್ತುಗಳನ್ನು ಒಳಗೊಂಡ, ಸಮಗ್ರ ಕಿಟ್ ವಿತರಿಸಲಿದೆ ಎಂದು, ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ. ಪಾಟೀಲ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ. ಮೈಸೂರು ಮುಕ್ತ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ, ನಾಳೆ ಬೆಳಗ್ಗೆ, ಚಾಮರಾಜನಗರ ಮತ್ತು ಮೈಸೂರು ಅರಣ್ಯ ವಿಭಾಗದ, 2 ಸಾವಿರದ 168 ಸಿಬ್ಬಂದಿಗೆ, ಕಿಟ್ ವಿತರಿಸಲಾಗುತ್ತಿದೆ, ಎಂದು, ಸಚಿವರು ತಿಳಿಸಿದ್ದಾರೆ.

<><><>

ಇಸ್ಕಾನ್ ದೇಗುಲದ, ಅಕ್ಷಯಪಾತ್ರೆ ಯೋಜನೆ, ಲಕ್ಷಾಂತರ ಸರ್ಕಾರಿ ಶಾಲೆಗಳ, ಬಡ ಮಕ್ಕಳ ಹಸಿವನ್ನು ತಣಿಸುತ್ತಿದೆ; ಅವರು ಶಾಲೆ ಬಿಡದೇ, ನಿರಂತರ ವಿದ್ಯಾಭ್ಯಾಸ ಕೈಗೊಳ್ಳಲು ಪ್ರೇರೇಪಿಸಿದೆ ಎಂದು, ಮೂಲ ಸೌಕರ್ಯ ಅಭಿವೃದ್ಧಿ ಖಾತೆ ಸಚಿವ ಎಂ.ಬಿ. ಪಾಟೀಲ, ಶ್ಲಾಘಿಸಿದ್ದಾರೆ.

ಹುಬ್ಬಳ್ಳಿಯ, ನವನಗರದ ಇಸ್ಕಾನ್ ಅಕ್ಷಯಪಾತ್ರ ಆಧುನಿಕ ಅಡುಗೆ ಮನೆಗೆ ಭೇಟಿ ನೀಡಿ, ಅವರು ವೀಕ್ಷಿಸಿದರು. ಅಕ್ಷಯ ಪಾತ್ರ ಫೌಂಡೇಶನ್ ನ ಹುಬ್ಬಳ್ಳಿ ಅಧ್ಯಕ ಶ್ರೀ ರಾಜೀವ್ ಲೋಚನ್ ದಾಸ್ ಮಾತನಾಡಿ, ಈ ಘಟಕ, 800 ಶಿಕ್ಷಣ ಸಂಸ್ಥೆಗಳ, 1 ಲಕ್ಷ 30 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಿಗೆ, ನಿತ್ಯ ಉಚಿತ ಆಹಾರ ಒದಗಿಸುತ್ತಿದೆ ಎಂದರು.

<><><>

ರಾಜ್ಯದ ಎಲ್ಲ ಸಂಚಾರಿ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ, ವಾಹನಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ, ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳ ಕುರಿತು, ಪೊಲೀಸ್ ಮಹಾ ನಿರೀಕ್ಷಕ ಎಂ.ಎ ಸಲೀಂ ಸುತ್ತೋಲೆ ಹೊರಡಿಸಿದ್ದಾರೆ.

<><><>

ಮುಂಗಾರು ಮಳೆ ಹಿನ್ನೆಲೆ, ಪ್ರವಾಸಿಗರು ಹಾಗೂ ಸಾರ್ವಜನಿಕ ಸುರಕ್ಷತೆಯ ಹಿತದೃಷ್ಟಿಯಿಂದ, ಉತ್ತರಕನ್ನಡ ಜಿಲ್ಲೆಯ ಕಡಲತೀರ, ನದಿ ಹಾಗೂ ನದಿ ತೀರಗಳಲ್ಲಿ ಬೋಟಿಂಗ್ ಹಾಗೂ ಜಲ ಸಾಹಸ ಕ್ರೀಡೆಗಳನ್ನು, ಸೆಪ್ಟೆಂಬರ್ 30ರ ವರೆಗೆ, ನಿ ೀಧಿಸಿ ಉತ್ತರಕನ್ನಡ ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಆದೇಶಿಸಿದ್ದಾರೆ.

<><><>

ಕಳೆದ 24 ಗಂಟೆಗಳಲ್ಲಿ, ರಾಜ್ಯಾದ್ಯಂತ 87 ಜನರಿಗೆ, ಕೋವಿಡ್ ದೃಢಪಟ್ಟಿದೆ. ಸೋಂಕಿತರ ಸಂಖ್ಯೆ 529ಕ್ಕೆ ಏರಿಕೆಯಾಗಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಿಳಿಸಿದೆ. ಒಟ್ಟು 311 ಸಕ್ರಿಯ ಕೋವಿಡ್ ಪ್ರಕರಣಗಳಿದ್ದು, 297 ಜನ ಮನೆ ಆರೈಕೆಯಲ್ಲಿದ್ದಾರೆ. 14 ಜನ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮುಂಜಾಗ್ರತೆ ವಹಿಸುವಂತೆ, ಆರೋಗ್ಯ ಇಲಾಖೆ ಜನತೆಯನ್ನು ಕೋರಿದೆ.

<><><>

ಕರ್ನಾಟಕ ಸಾಹಿತ್ಯ ಅಕಾದೆಮಿ, 2024ನೇ ಸಾಲಿನಲ್ಲಿ ಪ್ರಕಟಗೊಂಡಿರುವ ಕೃತಿಗಳನ್ನು, ಬಹುಮಾನಕ್ಕಾಗಿ ಪರಿಗಣಿಸಲಿದೆ. ಹೆಚ್ಚಿನ ಮಾಹಿತಿಗೆ ಜಾಲತಾಣ, www.sahithyaacademy.karnataka.gov.in ಸಂಪರ್ಕಿಸಬಹುದು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

<><><>